O.S./22/2023
P.W.-2

ಸಾಕ್ಷಿಯನ್ನು ದಿನಾಂಕ **27-03-2026** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ.ಎಸ್.ಜಿ. ವಕೀಲರಿಂದ.**

ನಮ್ಮ ಊರು ಅಮೃತ ತಾರಿಗ ಗ್ರಾಮ ಮತ್ತು ಸದರಿ ನಮ್ಮ ಊರು ವಾದಿಯರ ಊರಿನಿಂದ 11 ಕಿಮೀ ದೂರದಲ್ಲಿ ಇದೆ. 1 ರಿಂದ 3 ನೇ ವಾದಿಯರ ತಂದೆ ಶಂಕರ ನಾಯ್ಕ ಎಂದರೆ ಸರಿ. ಶಂಕರ್ ನಾಯ್ಕ ರ ತಾಯಿ ಚೆನ್ನಮ್ಮ ಎಂದರೆ ಸರಿ. ಚೆನ್ನಮ್ಮಳ ತಂಗಿ ನನಗೆ ದೊಡ್ಡಮ್ಮ ಆಗಬೇಕು ಎಂದರೆ ಸರಿ.ಚೆನ್ನಮ್ಮಳ ತಂಗಿ ಹೆಸರು ಲಕ್ಷ್ಮಮ್ಮ ನನ್ನ ತಾಯಿ. ನಾನು ಮತ್ತು ಶಂಕರ ನಾಯ್ಕ ಅಣ್ಣ ತಮ್ಮಂದಿರು ಆಗಬೇಕು ಎಂದರೆ ಸರಿ. ವಾದಿಯರ ಮತ್ತು ಪ್ರತಿವಾದಿಯರ ಕುಟುಂಬದ ಮೂಲ ಪುರುಷ ಯಾರು ಎಂದರೆ ತಿಮ್ಮ ನಾಯ್ಕ ಎಂದು ಹೇಳುತ್ತಾರೆ. ತಿಮ್ಮ ನಾಯ್ಕನಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು ಎರಡು ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಎಂದು ಹೇಳುತ್ತಾರೆ. ಹೆಣ್ಣು ಮಗಳ ಹೆಸರು ಏನೆಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಹೇಳುತ್ತಾರೆ. ಗಂಡು ಮಕ್ಕಳ ಹೆಸರು ಏನೆಂದರೆ ಸಾಕ್ಷಿಯು ಬಸವನಾಯ್ಕ ಮತ್ತು ಪುಟ್ಟನಾಯ್ಕ ಎಂದು ಹೇಳುತ್ತಾರೆ. ಎಲ್ಲಾ ಮನೆತನದವರಿಗೂ ಮನೆತನದ ದೇವರು ಇರುತ್ತದೆ ಎಂದರೆ ಸರಿ. ದೇವರ ಪೂಜೆ ಮಾಡಲು ಕಟ್ಟೆ ಕಟ್ಟಿರುತ್ತಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರ ಮೂಲಮನೆ ನೋಡಿರುತ್ತೇನೆ ಎಂದರೆ ಸರಿ. ಸದರಿ ಮನೆಯ ಬಲಭಾಗದಲ್ಲಿ ಶಂಕರ ನಾಯ್ಕ ವಾಸವಾವಿದ್ದರು ಮತ್ತು ಎಡಭಾಗದಲ್ಲಿ 1 ನೇ ಪ್ರತಿವಾದಿ ವಾಸವಿದ್ದರು. ಮದ್ಯ ಗೋಡೆ ಇತ್ತು ಎಂದರೆ ಸರಿ. ಈಗ ಸದರಿ ಮನೆ ಇಲ್ಲ ಎಂದರೆ ಸಾಕ್ಷಿಯು ಅರ್ಧ ಮನೆ ಇದೆ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ ಬಲಭಾಗದಲ್ಲಿ ಶಂಕರ ನಾಯ್ಕ ಮತ್ತು ಎಡಭಾಗದಲ್ಲಿ 1 ನೇ ಪ್ರತಿವಾದಿ ವಾಸ ಇದ್ದ ಬಗ್ಗೆ ನಾನು ಸುಮಾರು 40 ವರ್ಷಗಳ ಹಿಂದೆ ನೋಡಿರುತ್ತೇನೆ. ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಮಾಸ್ತಮ್ಮ ಮನೆ ದೇವರು ಆಗಿದ್ದರು ಎಂದರೆ

ಸರಿ. ವಾದಿಯರು ಮತ್ತು ಪ್ರತಿವಾದಿಯರ ಕುಟುಂಬ ಸದಸ್ಯರು ಒಟ್ಟಿಗೆ ಇದ್ದಾಗ ಮನೆಯಲ್ಲಿದ್ದ ಮೂಲ ವಿಗ್ರಹ ಶಂಕರನಾಯ್ಕ ರ ಹಿಸ್ಸೆಯಲ್ಲಿದ್ದು ಉಳಿದವರು ಪೂಜೆಗೆ ಪ್ರತ್ಯೇಕ ವಿಗ್ರಹ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿಯರು ಮತ್ತು ಪ್ರತಿವಾದಿಯರು ದೀಪಾವಳಿ ಹಬ್ಬದಲ್ಲಿ ಒಂದು ದಿನ ಉಪವಾಸ ಇದ್ದು ದೇವರಿಗೆ ಹಣ್ಣುಕಾಯಿ ಕೊಟ್ಟು ಬರುತ್ತಾರೆ ಎಂದರೆ ಸರಿ. ಅದೇ ರೀತಿ ಈಗಲೂ ಸಹ ವಾದಿಯರು ಮತ್ತು ಪ್ರತಿವಾದಿಯರು ಪ್ರತ್ಯೇಕವಾಗಿ ದೀಪಾವಳಿ ಸಮಯದಲ್ಲಿ ಸದರಿ ಉಪವಾಸವನ್ನು ಪ್ರತ್ಯೇಕವಾಗಿ ಆಚರಿಸಿರುತ್ತಾರೆ ಎಂದರೆ ಸರಿ. ನಾನು ಹಬ್ಬ ಹರಿದಿನಗಳಲ್ಲಿ ಶಂಕರ ನಾಯ್ಕರ ಮನೆಗೆ ಹೋಗುತ್ತಿರಾ ಎಂದರೆ ಸಾಕ್ಷಿಯು ಕೆಲವೊಂದು ಸಾರಿ ಹೋಗುತ್ತೇನೆ ಕೆಲವೊಂದು ಸಾರಿ ಹೋಗುವುದಿಲ್ಲ ಎಂದು ಹೇಳುತ್ತಾರೆ.

ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಜಮೀನು ಹೊನ್ನೆಬೈಲು ಗ್ರಾಮದಲ್ಲಿ ಇದೆ ಎಂದರೆ ಸರಿ. ಸದರಿ ಜಮೀನು ಇರುವ ಭಾಗಕ್ಕೆ ಕಿಳೇರಿ ಎಂದು ಹೇಳುತ್ತಾರೆ ಎಂದರೆ ಗೊತ್ತಿಲ್ಲ. ಅಣ್ಣತಮ್ಮಂದಿರ ಜಮೀನು ನೋಡಿದ್ದೀರಾ ಎಂದರೆ ಸಾಕ್ಷಿಯು ನೋಡಿರುವುದಿಲ್ಲ ಎಂದು ಹೇಳುತ್ತಾರೆ. 1 ನೇ ವಾದಿಯ ಮದುವೆ ಸುಮಾರು 25 ವರ್ಷಗಳ ಹಿಂದೆ ಆಗಿದ್ದು ನಾನು ಮದುವೆಗೆ ಹೋಗಿದ್ದೆ ಎಂದರೆ ಸರಿ. 1 ಮತ್ತು 2 ನೇ ವಾದಿಯರ ಮದುವೆ ಎಕಾಕಾಲಕ್ಕೆ ಆಗಿದೆ ಎಂದರೆ ಸಾಕ್ಷಿಯು ಇಬ್ಬರ ಮದುವೆ ಬೇರೆ ಬೇರೆ ಕಾಲಕ್ಕೆ ಆಗಿದೆ ಎಂದು ಹೇಳುತ್ತಾರೆ. 1 ಮತ್ತು 2 ನೇ ವಾದಿಯರಿಗೆ ಕನ್ಯೆ ನೋಡಲು ನಾನು ಮತ್ತು ಶಂಕರ ನಾಯ್ಕ ಹೋಗಿದ್ದೆವು ಎಂದರೆ ಸರಿ.

ಶಂಕರ ನಾಯ್ಕ ರ ಮಕ್ಕಳು ಕುಟುಂಬದ ಮೂಲ ವಾಸದ ಮನೆಯನ್ನು ಕಿತ್ತು ಹಾಕಿ ಹೊಸ ಅರ್ ಸಿಸಿ ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಆರ್ ಸಿಸಿ ಮನೆಗಳನ್ನು ಕಟ್ಟಿರುತ್ತಾರೆ ಅದರೆ ಮೂಲ ಮನೆಯಲ್ಲಿ ಅರ್ಧ ಮನೆ ಹಾಗೆ ಇದೆ

ಎಂದು ಹೇಳುತ್ತಾರೆ. ಹಳೆಯ ಅರ್ಧ ಖಾಲಿ ಮನೆಯಲ್ಲಿ ಯಾರು ಇದ್ದಾರೆ ಎಂದರೆ ಖಾಲಿ ಇದೆ ಎಂದು ಹೇಳುತ್ತಾರೆ. ನಾನು ಸದರಿ ಹಳೆ ಅರ್ಧ ಖಾಲಿ ಮನೆಗೆ ಕೊನೆ ಬಾರಿಗೆ ಯಾವಾಗ ಹೋಗಿರುತ್ತೇನೆ ಎಂದರೆ ಸಾಕ್ಷಿಯು ಸುಮಾರು 3-4 ವರ್ಷಗಳ ಹಿಂದೆ ಹೋಗಿರುತ್ತೇನೆ ಎಂದು ಹೇಳುತ್ತಾರೆ. ಈಗ ಸದರಿ ಅರ್ಧ ಖಾಲಿ ಮನೆಯನ್ನು ಪ್ರತಿವಾದಿಯರು ಕಿತ್ತು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಹಾಗೆ ಇದೆ ಎಂದು ಹೇಳುತ್ತಾರೆ.

1 ಮತ್ತು 2 ನೇ ವಾದಿಯರು ಒಟ್ಟಿಗೆ ಇದ್ದರಾ ಬೇರೆ ಬೇರೆ ಇದ್ದರಾ ಎಂದರೆ ಸಾಕ್ಷಿಯು ಇಬ್ಬರು ಒಟ್ಟಿಗೆ ಇರುತ್ತಾರೆ ಎಂದು ಹೇಳುತ್ತಾರೆ. ಅವರಿಬ್ಬರಲ್ಲಿ ಯಜಮಾನಿಕೆ ಯಾರು ಮಾಡುತ್ತಾರೆ ಎಂದರೆ ಸಾಕ್ಷಿಯು 1 ನೇ ವಾದಿ ಮಾಡುತ್ತಾರೆ ಎಂದು ಹೇಳುತ್ತಾರೆ.

1 ನೇ ಪ್ರತಿವಾದಿ ಯಾರ ಮಗ ಎಂದರೆ ಸಾಕ್ಷಿಯು ಪುಟ್ಟನಾಯ್ಕನ ಮಗ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಅಜ್ಜನ ಹೆಸರು ಬಸವನಾಯ್ಕ. ಪ್ರತಿವಾದಿಯರು ಎಷ್ಟು ಮನೆ ಕಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿಯರ ಮತ್ತು ಪ್ರತಿವಾದಿಯರ ಪ್ರತ್ಯೇಕವಾಗಿ ವಾಸ ಇರಲು ನಡೆದಂತಹ ಮಾತುಕತೆಗೆ ನಾನು ಹೋಗಿದ್ದೆನಾ ಎಂದರೆ ಸಾಕ್ಷಿಯು ಹೋಗಿಲ್ಲ ಎಂದು ಹೇಳುತ್ತಾರೆ. ತಿಮ್ಮ ನಾಯ್ಕ ನ ಮೊಮ್ಮಕಳು ಬೇರೆ ಬೇರೆ ಮನೆ ಕಟ್ಟಿಕೊಂಡು ವಾಸವಿದ್ದು ಸುಮಾರು 40 ವರ್ಷ ಆಯಿತು ಸಾಕ್ಷಿಯು ಎಂದರೆ ಗೊತ್ತಿಲ್ಲ ಎಂದು ಹೇಳುತ್ತಾರೆ.

1 ಮತ್ತು 2 ನೇ ವಾದಿಯರು ಬಗರಹುಕಂ ಜಮೀನುಗಳನ್ನು ಮಂಜೂರು ಮಾಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ.1 ಮತ್ತು 2 ನೇ ವಾದಿಯರು ಈಗ ಅಡಿಕೆ ಎಷ್ಟು ಬೆಳೆಯುತ್ತಾರೆ ಎಂದರೆ ಸಾಕ್ಷಿಯು ಸುಮಾರು 10 ಕ್ವಿಂಟಾಲ್ ಬೆಳೆಯುತ್ತಾರೆ ಎಂದು ಹೇಳುತ್ತಾರೆ. ಸದರಿ ವಾದಿಯರು ಭತ್ತ ಎಷ್ಟು ಬೆಳೆಯುತ್ತಾರೆ ಎಂದರೆ ಸಾಕ್ಷಿಯು ಸುಮಾರು 50 ಕ್ವಿಂಟಾಲ್ ಬೆಳೆಯುತ್ತಾರೆ ಎಂದು ಹೇಳುತ್ತಾರೆ.

1 ನೇ ಪ್ರತಿವಾದಿ ಎಷ್ಟು ಕ್ವಿಂಟಾಲ್ ಅಡಿಕೆ ಬೆಳೆಯುತ್ತಾರೆ ಎಂದರೆ ಗೊತ್ತಿಲ್ಲ. 1 ನೇ ವಾದಿ ಮತ್ತು 1 ನೇ ಪ್ರತಿವಾದಿ ಸುಮಾರು 10 ವರ್ಷಗಳಿಂದ ಪರಸ್ಪರ ಮಾತನಾಡುವುದಿಲ್ಲ. ಶಂಕರ ನಾಯ್ಕ ರ ಮಕ್ಕಳ ಮದುವೆಗೆ ಹೋಗಿರುತ್ತೇನೆ. ಪ್ರತಿವಾದಿಯರ ಅಣ್ಣತಮ್ಮಂದಿರ ಮಕ್ಕಳ ಮದುವೆಗೆ ಹೋಗಿರುವುದಿಲ್ಲ ಅವರು ನಮ್ಮನ್ನು ಕರೆದಿರುವುದಿಲ್ಲ. 1 ಮತ್ತು 2 ನೇ ವಾದಿಯರು ತಾವು ಬೆಳೆದ ಬೆಳೆಯನ್ನು ಮಾರಾಟ ಮಾಡುತ್ತಾರೆ ಎಂದರೆ ಸರಿ. ವಾದಿ ಪ್ರತಿವಾದಿಯರ ಮಧ್ಯೆ ಕ್ರಿಮಿನಲ್ ಕೇಸ್ ಆಗಿದೆ ಎಂದರೆ ಸಾಕ್ಷಿಯು ನಾನು ಘಟನೆಯನ್ನು ನೋಡಿರುವುದಿಲ್ಲ ಅದರೆ ಕ್ರಿಮಿನಲ್ ಪ್ರಕರಣ ಆಗಿರುವುದು ಕೇಳಿರುತ್ತೇನೆ ಎಂದು ಹೇಳುತ್ತಾರೆ. 1966 ರಲ್ಲಿ ವಾದಿ ಮತ್ತು ಪ್ರತಿವಾದಿಯರ ಕುಟುಂಬದಲ್ಲಿ ಹಿಸ್ಸೆ ಆಗಿದ್ದು ಅಲ್ಲಿಂದ ಎಲ್ಲರು ಪ್ರತ್ಯೇಕ ಸ್ವಾಧೀನಾನುಭದಲ್ಲಿ ಇದ್ದಾರೆ ಎಂದರೆ ಸುಳ್ಳು.

<u>ಮರು ವಿಚಾರಣೆಃ- ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.